ಅಂತ ಮತ್ತೊಂದು ಅರ್ಜಿ ಬರೆಸಿದರು. ಅದಕ್ಕೆ ಅನೇಕರ ಸಹಿ ಹಾಕಿಸಿ, ಆವತ್ತೇ ಡಿಸಿ ಸಾಹೇಬರಿಗೆ ರಿಜಿಸ್ಟರ್ ಪೋಸ್ಟ್ ಮೂಲಕ ಕಳುಹಿಸಿದರು. ಅದು ಗೋಮಾಳದ ಭೂಮಿಯನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಕಸರತ್ತಾಗಿತ್ತು.

ಗೋಮಾಳದಲ್ಲಿ ಏಳು ಎಕರೆ ಊರವರಿಗೆ ಗೊತ್ತೇ ಆಗದಂತೆ ಪರಭಾರೆ ಆಗಿದೆ! ಎಲ್ಲಿಂದಲೋ ಬಂದ ಇಮಾಂ ಸಾಬರು, ಮನೆ ಮಠ ಇಲ್ಲದ ಸಿದ್ದಾಚಾರಿಗೆ ಭೂಮಿಯ ಹಕ್ಕು ಸಿಕ್ಕಿದ್ದೆಂಗೆ ಎನ್ನುವುದು ಪ್ರೆಸಿಡೆಂಟರಿಗೆ ಒಗಟಾಯಿತು. ವಿಶ್ವನಾಥ ಬಂದ ಮೇಲೆ ಗೋಮಾಳದ ಸುತ್ತ ಇರೋ ಭೂಮಿಗಳು ಯಾರ ಹೆಸರಲ್ಲಿವೆ ಅನ್ನೋದನ್ನು ಪತ್ತೆ ಮಾಡಬೇಕು ಅಂತ ನಿರ್ಧರಿಸಿದರು.

ವಿಶ್ವನಾಥ ಕೊಟ್ಟ ಅರ್ಜಿ, ಆವತ್ತು ಸಂಜೆ ತಹಸೀಲ್ದಾರರ ಗಮನಕ್ಕೆ ಬಂತು. ಹೊಸಳ್ಳಿ ಗೋಮಾಳಕ್ಕೆ ಸೇರಿದ ಇನ್ನೂ ಏಳೆಂಟು ಎಕರೆ ಭೂಮಿ ಇದೆ ಅನ್ನೋದು ಗೊತ್ತಾಗಿದ್ದೇ ತಡ ಅವರು ಸಣ್ಣ ಸ್ವಾಮಿಗಳಿಗೆ ಫೋನ್ ಮಾಡಿದರು. ನೀವು ಕೇಳಿರೊ ಗೋಮಾಳದ ಜಮೀನನ್ನು ಕೊಡೋಕೆ ಊರವರು ಒಪ್ಪದಿದ್ದರೆ, ಇಮಾಂ ಸಾಬರು ಮತ್ತು ಸಿದ್ದಾಚಾರಿ ಅನ್ನೋರು ಒತ್ತುವರಿ ಮಾಡಿಕೊಂಡಿರೊ ಏಳು ಎಕರೆಯನ್ನು ಮಠಕ್ಕೆ ಕೊಡಿಸಿ ಅಂತ ನೀವು ಇನ್ನೊಂದು ಅರ್ಜಿ ಬರೆದು ಕಳಿಸುವಂತೆ ಸ್ವಾಮಿಗಳಿಗೆ ಸಲಹೆ ಕೊಟ್ಟರು.

ಮಾರನೇ ದಿನವೇ ಹೊಸಳ್ಳಿ ಗೋಮಾಳದ ಹದಿನೈದು ಎಕರೆ ಭೂಮಿಯನ್ನು ಶ್ರೀಮಠಕ್ಕೆ ಲೀಸ್‌ಗೆ ಕೊಟ್ಟರೆ ಅಲ್ಲಿ ಒಂದು ಪಬ್ಲಿಕ್ ಸ್ಕೂಲು ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಿಸುವುದಾಗಿ ಸಣ್ಣ ಸ್ವಾಮಿಗಳು ಹೊಸದಾಗಿ ಅರ್ಜಿ ಬರೆಸಿ ತಹಸೀಲ್ದಾರರಿಗೆ ಕಳಿಸಿಕೊಟ್ಟರು! ಅದು ಒಂದು ದಿನ ತಡವಾಗಿ ಪ್ರೆಸಿಡೆಂಟರಿಗೆ ಗೊತ್ತಾಯಿತು. ತಹಸೀಲ್ದಾರರಿಗೆ ಅರ್ಜಿ ಕೊಟ್ಟು ತಪ್ಪು ಮಾಡಿದೆ ಅಂತ ಅವರು ಕೈಕೈ ಹಿಸುಕಿಕೊಂಡು ಚಡಪಡಿಸಿದರು.

ಮೂರು ದಿನ ಕಳೆದ ಮೇಲೆ ವಿಶ್ವನಾಥ ಬರಿಗೈಯಲ್ಲಿ ಬಂದ. ಬ್ರಿಟಿಷರ ಕಾಲದ ಸರ್ವೆ ದಾಖಲೆಗಳಲ್ಲಿ ಕೆಲವು ಬೆಂಗಳೂರಿನಲ್ಲೂ, ಇನ್ನು ಕೆಲವು ಚೆನ್ನೈನಲ್ಲೂ ಇವೆಯಂತೆ. ದುರ್ಗದ ರೆಕಾರ್ಡ್ ರೂಮಿನಲ್ಲಿ 1960ರ ನಂತರದ ದಾಖಲೆಗಳಷ್ಟೇ ಇವೆ. ಕೈಬರಹದ ಪಹಣಿಯಲ್ಲಿ ಸಿದ್ದಾಚಾರಿ ಹೆಸರಿದೆ. 1962ರ ನಂತರ ಸಿದ್ದಾಚಾರಿ ಹೆಸರು ಬಿಟ್ಟುಹೋಗಿ 'ಮಹಾತ್ಮ ಗಾಂಧಿ ಶಿಕ್ಷಣ ಸಮಿತಿ' ಹೆಸರು ಬಂದಿದೆ. ಸಿದ್ದಾಚಾರಿ ತನ್ನ ಭೂಮಿಯನ್ನು ಹೈಸ್ಕೂಲಿಗೆ ದಾನ ಕೊಟ್ಟಿರಬೌದು ಅಂತ ಹೇಳಿದ ಮೇಲೆ ಪ್ರೆಸಿಡೆಂಟರಿಗೆ ನಿರಾಸೆ ಆಯಿತು.

ಗೋಮಾಳದ ಎರಡು ಎಕರೆಯಷ್ಟನ್ನು ಇಮಾಂ ಸಾಬರು ಒತ್ತುವರಿ ಮಾಡಿದ್ದಾರೆ ಅಂತ ಪ್ರೆಸಿಡೆಂಟರು ತಹಸೀಲ್ದಾರ್‌ಗೆ ದೂರುಕೊಟ್ಟಿದ್ದಾರೆ ಅಂತ ವಿಶ್ವನಾಥನೇ ಮೊದೀನ್‌ಗೆ ಹೇಳಿದ! ಈ ವಿಷಯ ನಾನು ಹೇಳಿದೆ ಅಂತ ಯಾರಿಗೂ ಹೇಳಬೇಡಿ ಅಂತ ವಿನಂತಿ ಮಾಡಿಕೊಂಡ.

ಭೂಮಿಯನ್ನು ಸರ್ಕಾರ ನಮಗೆ ಮುಫತ್ತಾಗಿ ಕೊಟ್ಟಿರೊ ದಾಖಲೆ ಇರುವಾಗ ಪ್ರೆಸಿಡೆಂಟರು ದೂರು ಕೊಟ್ಟಿದ್ದೇಕೆ ಎನ್ನುವುದು ಮೊದೀನ್‌ಗೆ ಅರ್ಥವಾಗಲಿಲ್ಲ. ಅರ್ಜಿ ಬರೆಯೋ ಮೊದಲು ನನ್ನನ್ನು ಕೇಳಬಹುದಿತ್ತು ಅನ್ನಿಸಿ ಬೇಸರ ಮಾಡಿಕೊಂಡ. ತನ್ನಲ್ಲಿರುವ ದಾಖಲೆಗಳನ್ನು ಅವರಿಗೆ ತೋರಿಸಿದರೆ ಸರಿಹೋಗಬಹುದು ಅಂತ ಅನಿಸಿದರೂ, ಸದ್ಯಕ್ಕೆ ಬೇಡವೆಂದು ಸುಮ್ಮನಾದ.

## 3

ಹೇಗಾದರೂ ಮಾಡಿ ಗೋಮಾಳ ಉಳಿಸಿಕೊಳ್ಳಲೇಬೇಕು ಅಂತ ನಿರ್ಧರಿಸಿ ಕೆಲವರು ಗೋಮಾಳ ರಕ್ಷಣಾ ಸಮಿತಿ ರಚಿಸಿಕೊಂಡರು. ಅದರ ಹೆಸರಿನಲ್ಲೇ ಡಿಸಿ ಸಾಹೇಬರಿಗೆ ಮತ್ತೊಂದು ಅರ್ಜಿ ಬರೆದರು. ಅದರಲ್ಲಿ ಗೋಮಾಳವನ್ನು ಸೂಗೂರು ಮಠಕ್ಕೆ ಮಂಜೂರು ಮಾಡಿದರೆ ನಿಮ್ಮ ಕಚೇರಿಗೆ